# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರಳ ಸಾಮೂಹಿಕ ವಿವಾಹ ಜನಪ್ರಿಯಗೊಳಿಸಲು "ಆದರ್ಶ ವಿವಾಹ" ಯೋಜನೆ ಜಾರಿ -ಪ್ರೋತ್ಸಾಹ ಧನ ನೀಡುವ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ.81 ಎಂ.ಎಸ್.ಟಿ.2007 ದಿನಾಂಕ:20-5-2007.

**ಪ್ರಸ್ತಾವನೆ:-**

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸರಳ ಸಾಮೂಹಿಕ ವಿವಾಹವನ್ನು ಜನಪ್ರಿಯಗೊಳಿಸಲು "ಆದರ್ಶ ವಿವಾಹ" ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ:ಆರ್.ಡಿ 81 ಎಂಎಸ್‌ಟಿ 2007 ದಿನಾಂಕ:2-5-2007ರಂದು ಜಾರಿಗೊಳಿಸಿರುತ್ತದೆ. ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು 2007-08ನೇ ಸಾಲಿನ ಅಯವ್ಯಯದಲ್ಲಿಈ ಯೋಜನೆಯ ವೆಚ್ಚವನ್ನು ಭರಿಸಲು ಲೆಕ್ಕ ಶೀರ್ಷಿಕೆ 2250-00-800-2-17 (ಯೋಜನೆ) ಸಾಮೂಹಿಕ ವಿವಾಹಗಳಡಿಯಲಿ ರೂ.1000.00 ಲಕ್ಷಗಳನ್ನು ಒದಗಿಸಲಾಗಿದೆ. ಅದರಂತೆ ಕೆಳಕಂಡ 16 ಜಿಲ್ಲೆಗಳಿಗೆ ಅಂದರೆ1)ಬೆಂಗಳೂರು ಗ್ರಾಮಾಂತರ 2)ಬಾಗಲಕೋಟೆ 3)ಬೆಳಗಾಂ 4)ಬೀದರ್ 5)ಬಳ್ಳಾರಿ 6) ರಾಯಚೂರು 7)ಧಾರವಾಡ 8)ಶಿವಮೊಗ್ಗ 9)ಚಿತ್ರದುರ್ಗ 10)ಕೊಪ್ಪಳ 11)ಚಾಮರಾಜನಗರ 12)ಗದಗ್ 13)ಹಾವೇರಿ 14)ಹಾಸನ 15)ಗುಲ್ಬರ್ಗಾ 16)ಬಿಜಾಪುರ. ಈ ಜಿಲ್ಲೆಗಳಿಗೆ ಲೆಕ್ಕಶೀರ್ಷಿಕೆ 2250-00-800-2-17-059 (ಯೋಜನೆ) ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ರೂ.3 ಲಕ್ಷಗಳನ್ನು ಇನ್ನುಳಿದ 15 ಜಿಲ್ಲೆಗಳಿಗೆ ತಲಾ 5.00 ಲಕ್ಷಗಳಿಗೆ ಲೆಕ್ಕಶೀರ್ಷಿಕೆ 2250-00-800-2-17-422 (ವಿಶೇಷ ಘಟಕ ಯೋಜನೆ) ರ ಅಡಿಯಲ್ಲಿ ತಲಾ 1.00 ಲಕ್ಷ ರೂಗಳನ್ನು ಹಾಗೂ ಲೆಕ್ಕಶೀರ್ಷಿಕೆ 2250-00-800-2-17-423 (ಗಿರಿಜನ ಉಪ ಯೋಜನೆ ) ರ ಅಡಿಯಲ್ಲಿ ತಲಾ 0.40ಲಕ್ಷ ರೂಗಳನ್ನು (ಬಾಗಲಕೋಟೆ ಜಿಲ್ಲೆಗೆ 0.50 ಲಕ್ಷ ರೂಗಳನ್ನು) ಬಿಡುಗಡೆ ಮಾಡಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ಕೋಲಾರ ಮತ್ತು ದಾವಣಗೆರೆ ಜಿಲ್ಲೆಗಳಿಂದಲೂ ಆದರ್ಶ ವಿವಾಹ ಯೋಜನೆಯಡಿಯಲ್ಲಿ ಹಣ ಬಿಡುಗಡೆಗೊಳಿಸಲು ಕೋರಿಕೆ ಬಂದಿರುತ್ತದೆ. ಹಾಗೂ ಉಳಿದ ಜಿಲ್ಲೆಗಳು ಆದರ್ಶ ವಿವಾಹ ಯೋಜನೆಯಡಿಯಲ್ಲಿ ಹಣ ಬಿಡುಗಡೆಗೊಳಿಸಲು ಮುಂದೆ ಬೇಡಿಕೆ ಸಲ್ಲಿಸುವ ಸಂಭವವಿರುವ ಅಂಶವನ್ನು ಸರ್ಕಾರವು ಗಮನಿಸಿರುತ್ತದೆ. ಆದುದರಿಂದ ಸರ್ಕಾರದ ಈ ಕೆಳಕಂಡ ಆದೇಶ.

## ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 81 ಎಂಎಸ್‌ಟಿ 2007 ಬೆಂಗಳೂರು,ದಿನಾಂಕ:01-10-2007.

ಆದರ್ಶ ವಿವಾಹ ಯೋಜನೆಯನ್ನುರಾಜ್ಯದಲ್ಲಿ ಅನುಷ್ಠಾನಗೊಳಿಸಲು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ರಲ್ಲಿರುವಂತೆ ಇನ್ನುಳಿದ 13 ಜಿಲೆಗಳಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ಜಾರಿಗೊಳಿಸಲು ತಗಲುವ ವೆಚ್ಚ ರೂ 100.00 (ಒಂದು ನೂರು ಲಕ್ಷ ರೂಗಳು ಮಾತ್ರ) ಸಂಬಂಧಪಟ್ಟ ಜಿಲ್ಲಾಧಿಕಾರಿಗೆಳಿಗೆ ಬಿಡುಗಡೆ ಮಾಡಲಾಗಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು 2007-08 ನೇ ಆರ್ಥಿಕ ಸಾಲಿನ ಲೆಕ್ಕ ಶೀರ್ಷಿಕೆ 2250-00-800-2-17-059 ರ ಅಡಿಯಲ್ಲಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು. ಈ ಹೊಸ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರು ಉಸ್ತುವಾರಿ ಮಾಡತಕ್ಕದ್ದು. ಸಂಬಂಧ ಪಟ್ಟ ಜಿಲ್ಲಾಧಿಕಾರಿಗಳು ಈ ಯೋಜನೆ ಹಣವನ್ನು ಖಜಾನೆಯಿಂದ ಪಡೆಯಲು ಹಾಗೂ ಸಂದಾಯ ಮಾಡಲು ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಯೆಂದು ಪದನಾಮ ಗೊಳಿಸಲಾಗಿದೆ.

ಈ ಯೋಜನೆಯ ಅಂಕಿ ಅಂಶಗಳ ವರದಿಗಳನ್ನು ಅದರ ವಿಮರ್ಶೆಗಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ,ಬೆಂಗಳೂರು, ಪ್ರಾದೇಶಿಕ ಆಯುಕ್ತರು ಹಾಗೂ ಸರ್ಕಾರಕ್ಕೆ ಪ್ರತಿ ಮೂರು ತಿಂಗಳಿಗೊಮ್ಮೆ ಸಲ್ಲಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಡಿ 1996, ದಿನಾಂಕ:10-07-1996 ರಲ್ಲಿ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ,**

**(ಎಂ.ಕೆ.ನರಸಿಂಹಲು)**
ಅಧೀನ ಕಾರ್ಯದರ್ಶಿಗಳು(ಭೂ ಕಂದಾಯ)
ಕಂದಾಯ ಇಲಾಖೆ

**ಇವರಿಗೆ,**

1) ಮಹಾಲೇಖಪಾಲಕರು (ಲೆಕ್ಕಪತ್ರ ಮತ್ತು ಲೆಕ್ಕತಪಾಸಣೆ) (ಎ ಮತ್ತು ಇ) ಕರ್ನಾಟಕ ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ/ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ ಸಮಾಜ ಕಲ್ಯಾಣ ಇಲಾಖೆ/ ಆಂತರಿಕ ಆರ್ಥಿಕ ಸಲಹೆಗಾರರು, ಕಂದಾಯ ಇಲಾಖೆ.
4) ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
5) ಮಾನ್ಯ ಉಪಮುಖ್ಯಮಂತ್ರಿಯವರ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
6) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ ಬೆಂಗಳೂರು.
7) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾವಿ/ಗುಲ್ಬರ್ಗಾ ವಿಭಾಗ.
8) ಎಲ್ಲಾ ಜಿಲ್ಲಾಧಿಕಾರಿಗಳು.
9) ನಿರ್ದೇಶಕರು ಖಜಾನೆ ಇಲಾಖೆ ಬೆಂಗಳೂರು.
10) ಉಪ ನಿರ್ದೇಶಕರು ಎಸ್.ಎಂ.ಸಿ ಖನಿಜ ಭವನ ಬೆಂಗಳೂರು.
11) ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿ.
12) ರಾಜ್ಯ ಹುಜೂರು ಖಜನೆ ಬೆಂಗಳೂರು.
13) ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

ಸರ್ಕಾರಿ ಆದೇಶ ಸಂಖ್ಯೆ: ಆರ್ ಡಿ 81 ಎಂ ಎಸ್ ಟಿ 2007
ದಿನಾಂಕ 1-10-2007 ಕ್ಕೆ ಅನುಬಂಧ-1

ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)

| ಕ್ರ.ಸಂ | ಜಿಲ್ಲೆಗಳು | ಲೆಕ್ಕ ಶೀರ್ಷಿಕೆ 2250-00-800-2-17-059 |
|---|---|---|
| 1. | ಬೆಂಗಳೂರು ನಗರ | 28.00 |
| 2. | ಚಿಕ್ಕಮಗಳೂರು | 5.00 |
| 3. | ದಕ್ಷಿಣ ಕನ್ನಡ | 8.00 |
| 4. | ದಾವಣಗೆರೆ | 7.00 |
| 5. | ಮಡಿಕೇರಿ | 2.00 |
| 6. | ಕೋಲಾರ | 6.00 |
| 7. | ಮಂಡ್ಯ | 7.00 |
| 8. | ಮೈಸೂರು | 10.00 |
| 9. | ತುಮಕೂರು | 10.00 |
| 10. | ಉತ್ತರ ಕನ್ನಡ | 5.00 |
| 11. | ಉಡುಪಿ | 4.00 |
| 12. | ರಾಮನಗರ | 4.00 |
| 13. | ಚಿಕ್ಕಬಳ್ಳಾಪುರ | 4.00 |
| | ಒಟ್ಟು | 100.00 |

(ಎಂ.ಕೆ.ನರಸಿಂಹಲು) 1/10/07
ಅಧೀನ ಕಾರ್ಯದರ್ಶಿಗಳು(ಭೂ ಕಂದಾಯ)
ಕಂದಾಯ ಇಲಾಖೆ